# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 367 |
| 2 | ಸದಸ್ಯರ ಹೆಸರು | : | ಶ್ರೀ ಪಿ. ಆರ್. ರಮೇಶ್<br>(ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 15-09-2022 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಗ್ರಹಿಸುವ ಹಸಿಕಸವನ್ನು ಸಂಸ್ಕರಿಸಲು ಎಷ್ಟು ಘಟಕಗಳಿಗೆ ಸಾಗಾಣೆ ಮಾಡಲಾಗುತ್ತಿದೆ; | •ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಗ್ರಹಣೆಯಾಗುವ ಹಸಿಕಸವನ್ನು ಸಂಸ್ಕರಿಸುವ ಒಟ್ಟು 8 ಘಟಕಗಳಿರುತ್ತವೆ. ಈ ಪೈಕಿ 7 ಘಟಕಗಳು ಬಿ.ಬಿ.ಎಂ.ಪಿಗೆ ಸೇರಿದ್ದಾಗಿದ್ದು, ಈ 7 ಘಟಕಗಳ ಪೈಕಿ ಒಂದು ಘಟಕವು ಸ್ಥಳೀಯ ಕಾರಣಗಳಿಂದ ಕಾರ್ಯನಿರ್ವಹಿಸುತ್ತಿರುವುದಿಲ್ಲ.<br>•ಉಳಿದಂತೆ, ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ಇರುವ ಹಸಿಕಸ ಸಂಸ್ಕರಣಾ ಘಟಕಗಳ ಪೈಕಿ ಒಂದು ಘಟಕವು ಖಾಸಗಿ ಸಂಸ್ಥೆಯವರದ್ದಾಗಿದೆ. |
| ಆ | ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಗ್ರಹಿಸುವ ಹಸಿ ಕಸವನ್ನು ಸಂಸ್ಕರಿಸಲು ಎಷ್ಟು ಘಟಕಗಳು ಕಾರ್ಯ ನಿರ್ವಹಿಸುತ್ತಿವೆ; ಸದರಿ ಘಟಕಗಳನ್ನು ಪಾಲಿಕೆಯು ನಿರ್ವಹಿಸುತ್ತಿದೆಯೆ ಅಥವಾ ಖಾಸಗಿಯವರಿಗೆ ನೀಡಲಾಗಿದೆಯೆ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) ಖಾಸಗೀಯವರಿಗೆ ನೀಡಿದ್ದಲ್ಲಿ ಯಾವ ಆಧಾರದ ಮೇಲೆ ಹಾಗೂ ಯಾವ ಮಾನದಂಡನೆಗಳನ್ನು ಅನುಸರಿಸಿ ನೀಡಲಾಗಿರುತ್ತದೆ; ಈ ಸಂಬಂಧ ನ್ಯಾಯಾಲಯ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಎಷ್ಟು ಬಾರಿ ನೋಟೀಸ್ ಬಂದಿದೆ; ಅವುಗಳ ಸಂಪೂರ್ಣ ಮಾಹಿತಿಯನ್ನು ನೀಡುವುದು; | •ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 7 ಘಟಕಗಳ ಪೈಕಿ 6 ಘಟಕಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 1 ಘಟಕವನ್ನು ಖಾಸಗಿ ಸಂಸ್ಥೆಯಾದ ಮೆ: ಸತಾರೆಂ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಕನ್ನಹಳ್ಳಿಯಲ್ಲಿನ 5 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಶೆಡ್ ಮತ್ತು ಉಳಿದ 15 ಎಕರೆ ಸೇರಿ ಒಟ್ಟು 20 ಎಕರೆ ಜಾಗವನ್ನು 30 ವರ್ಷಗಳ ಅವಧಿಗೆ ಉಪಯೋಗಕ್ಕೆ ಮಾತ್ರ (PERMISSIVE USE only) ಆಧಾರದ ಮೇಲೆ ಹಲವು ಷರತ್ತಿಗೊಳಪಡಿಸಿ ನೀಡಲು ಸರ್ಕಾರದ ಅನುಮೋದನೆಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 285 ಎಂಎನ್‌ವೈ 2014, ದಿನಾಂಕ: 19-08-2019 ರ ಮೂಲಕ ನೀಡಲಾಗಿದೆ. ಆದೇಶದ ಪ್ರತಿಯನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ.<br><br>•ಮತ್ತೊಂದು ಘಟಕವು ಖಾಸಗಿ ಘಟಕವಾಗಿದ್ದು, ಬೆಂಗಳೂರಿನಲ್ಲಿ ಉತ್ಪತ್ತಿಯಾಗುವ ಕಸವನ್ನು ಸಂಸ್ಕರಣೆ ಮಾಡಲು ಟೆಂಡರ್ ಕರೆದಿದ್ದು, ಸದರಿ ಟೆಂಡರ್‌ನಲ್ಲಿ M/s MSGP Infra Tech Private Limited ಎಂಬ ಖಾಸಗಿ ಸಂಸ್ಥೆಯು ಆಯ್ಕೆಯಾಗಿರುತ್ತದೆ. ಅದರಂತೆ ಕಸ ಸಂಸ್ಕರಣೆ ಮಾಡಲು ಟಿಪ್ಪಿಂಗ್ ಫೀ ಆಧಾರದಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 206 ಎಂಎನ್‌ವೈ 2013, ದಿನಾಂಕ: 21-11-2013 ರನ್ವಯ M/s MSGP Infra Tech Private Limited ಎಂಬ ಖಾಸಗಿ ಸಂಸ್ಥೆಯು, ದೊಡ್ಡಬಳ್ಳಾಪುರ ಸಮೀಪದ ಚಿಗರನಹಳ್ಳಿಯಲ್ಲಿ ಘನತ್ಯಾಜ್ಯ ನಿರ್ವಹಣಾ/ಸಂಸ್ಕರಣೆ ಕಾರ್ಯ ನಿರ್ವಹಿಸಲು ಹಲವು ಷರತ್ತಿಗೊಳಪಡಿಸಿ ಅನುಮೋದನೆ ನೀಡಿ ಆದೇಶಿಸಲಾಗಿದೆ. ಆದೇಶದ ಪ್ರತಿಯನ್ನು **<u>ಅನುಬಂಧ-2</u>** ರಲ್ಲಿ ನೀಡಲಾಗಿದೆ. |

• ಕರ್ನಾಟಕ ಕಾಂಪೋಸ್ಟ ಅಭಿವೃದ್ಧಿ ನಿಗಮ ನಿಯಮಿತ (ಕೆಸಿಡಿಸಿ) ಘಟಕವನ್ನು ಮುಚ್ಚಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯವರು ದಿನಾಂಕ: 27-01-2022ರಲ್ಲಿ ಆದೇಶಿಸಿದ್ದು, ಕೆಲವೊಂದು ಮಾರ್ಪಡುಗಳನ್ನು ಸದರಿ ಘಟಕದಲ್ಲಿ ಅಳವಡಿಕೊಳ್ಳಬೇಕೆಂದು ಆದೇಶ ನೀಡಿರುವುದನ್ನು ಅಬೆಯನ್ಸ್‌ನಲ್ಲಿ ಇಟ್ಟಿರುತ್ತಾರೆ. ಕರ್ನಾಟಕ ಕಾಂಪೋಸ್ಟ ಅಭಿವೃದ್ಧಿ ನಿಗಮ ನಿಯಮಿತ ರವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡಿರುವ ಸೂಚನೆಯನ್ನು ಅಳವಡಿಸಿಕೊಂಡು ಈ ಅಬಿಯೆನ್ಸ್ ಆದೇಶವನ್ನು ಹಿಂಪಡೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದಿನಾಂಕ: 26-08-2022ರಲ್ಲಿ ಪತ್ರ ಬರೆದಿರುತ್ತಾರೆ.

• ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಈ ಕೆಳಕಂಡ ಘಟಕಗಳಿಗೆ Air Act and Water Act approval ಗಳನ್ನು ಕೆಳಕಂಡ ಅವಧಿಯವರೆಗೆ ನೀಡಲಾಗಿರುತ್ತದೆ.

| ಕ್ರ.ಸಂ. | ಘಟಕಗಳ ಹೆಸರು | ಷರಾ |
|---|---|---|
| 1. | ಚಿಕ್ಕನಾಗಮಂಗಲ | ದಿನಾಂಕ: 01.07.2021 ರಿಂದ 30.06.2023ರ ವರೆಗೆ |
| 2. | ದೊಡ್ಡಬಿದರಕಲ್ಲು | ದಿನಾಂಕ: 01.07.2021 ರಿಂದ 30.06.2026ರ ವರೆಗೆ |
| 3. | ಲಿಂಗಧೀರನಹಳ್ಳಿ | ದಿನಾಂಕ: 01.07.2018 ರಿಂದ 30.06.2023ರ ವರೆಗೆ |
| 4. | ಸುಬ್ಬರಾಯನಪಾಳ್ಯ | ದಿನಾಂಕ: 23.11.2021 ರಂದು ಅನುಮೋದನೆ ಪಡೆಯಲು ಅರ್ಜಿ ಸಲ್ಲಿಸಲಾಗಿದೆ. ಘಟಕದಲ್ಲಿ ನವೀನ ತಂತ್ರಜ್ಞಾನ / ವಿಧಾನಗಳಿಂದ ಕಸವನ್ನು ಸಂಸ್ಕರಣೆ ಮತ್ತು ಸಂಶೋಧನೆ ಮಾಡಲು ಮೆ॥ ರುದ್ರಾಕ್ಷ ವೇಸ್ಟ್ ಯುಟಿಲಿಟೀಸ್ ಆರ್&ಡಿ ಪ್ರೈ. ಲಿ. ಕಂಪನಿಯಿಂದ ಕ್ರಮ ಕೈಗೊಳ್ಳಲಾಗಿದೆ. |
| 5. | ಕೆ.ಸಿ.ಡಿ.ಸಿ | ಕೆಸಿಡಿಸಿ ಘಟಕವನ್ನು ಮುಚ್ಚಲು ಕೆಎಸ್‌ಪಿಸಿಬಿ ಯವರು ದಿನಾಂಕ: 27.01.2022ರಲ್ಲಿ ಆದೇಶಿಸಿದ್ದು, ನಂತರ ಕೆಲವೊಂದು ಮಾರ್ಪಾಡುಗಳನ್ನು ಸದರಿ ಘಟಕದಲ್ಲಿ ಅಳವಡಿಸಿಕೊಳ್ಳಬೇಕೆಂದು ಆದೇಶ ನೀಡಿರುವುದನ್ನು ಅಬೆಯನ್ಸ್‌ನಲ್ಲಿ ಇಟ್ಟಿರುತ್ತಾರೆ. ಕೆಸಿಡಿಸಿ ರವರು ಕೆಎಸ್‌ಪಿಸಿಬಿ ರವರು ನೀಡಿದ ಸೂಚನೆಯನ್ನು ಅಳವಡಿಸಿಕೊಂಡು ಈ ಅಬೆಯನ್ಸ್ ಆದೇಶವನ್ನು ಹಿಂಪಡೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದಿನಾಂಕ: 26.08.2022ರಲ್ಲಿ ಪತ್ರ ಬರೆದಿರುತ್ತಾರೆ. |

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ 24739/2012 ಮತ್ತು ಸಂಬಂಧಿತ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ನೀಡುತ್ತಿರುವ ನಿರ್ದೇಶನಗಳನ್ನು ಪಾಲಿಸಲು ಕ್ರಮವಹಿಸಲಾಗುತ್ತಿದೆ.

..3/-

| | | |
|---|---|---|
| ಇ | ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆಗೆ ಹಾಗೂ ಸಾಗಾಣಿಕೆಗೆ ಸಂಸ್ಕರಣಾ ಘಟಕವನ್ನು (Processing Unit) ಮತ್ತು ನಿರ್ವಹಣೆಯನ್ನು ನಿರ್ವಹಿಸುವ ಹಾಲಿ ಗುತ್ತಿಗೆದಾರರಿಗೆ ಎಷ್ಟು ವರ್ಷಗಳವರೆಗೆ ಗುತ್ತಿಗೆಯನ್ನು ನೀಡಲಾಗಿರುತ್ತದೆ; ನೀಡಲಾಗಿರುವ ಗುತ್ತಿಗೆದಾರರ ಹೆಸರುಗಳೊಂದಿಗೆ ಮಾಹಿತಿಯನ್ನು ಹಾಗೂ ಸಂಬಂಧಪಟ್ಟ ಆದೇಶಗಳ ಹಾಗೂ ಕರಾರಿನ ಪ್ರತಿಯನ್ನು ಒದಗಿಸುವುದು: | ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆಗೆ ಹಾಗೂ ಸಾಗಾಣಿಕೆಗೆ ಸಂಸ್ಕರಣಾ ಘಟಕವನ್ನು (Processing Unit) ಮತ್ತು ನಿರ್ವಹಣೆಯನ್ನು ನಿರ್ವಹಿಸುವ ಹಾಲಿ ಗುತ್ತಿಗೆದಾರರಿಗೆ ನೀಡಿರುವ ಗುತ್ತಿಗೆ ವಿವರಗಳನ್ನ ಅನುಬಂಧ-3 ರಲ್ಲಿ ನೀಡಲಾಗಿದೆ. |
| ಈ | ಪಾಲಿಕೆ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ, ಸಾಗಾಣೆ, ಸಂಸ್ಕರಣೆ ಮತ್ತು ನಿರ್ವಹಣೆಗೆ ತಗಲುತ್ತಿರುವ ಒಟ್ಟು ವಾರ್ಷಿಕ ವೆಚ್ಚವೆಷ್ಟು; ಹಾಗೂ ಇದುವರೆಗೆ ಸದರಿಯವರಿಗೆ ಪಾವತಿಸಿರುವ ಮೊತ್ತವೆಷ್ಟು; ಸಂಪೂರ್ಣ ವಿವರ ನೀಡುವುದು: | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ, ಸಾಗಾಣೆ, ಸಂಸ್ಕರಣೆ ಮತ್ತು ನಿರ್ವಹಣೆಗೆ ವಾರ್ಷಿಕವಾಗಿ ತಗಲುತ್ತಿರುವ ಮೊತ್ತದ ವಿವರ ಈ ಕೆಳಕಂಡಂತಿದೆ.<br>**(ಎ) ಸಂಸ್ಕರಣೆ ಮತ್ತು ನಿರ್ವಹಣೆಗೆ ತಗಲುತ್ತಿರುವ ಒಟ್ಟು ವಾರ್ಷಿಕ ವೆಚ್ಚದ ವಿವರ**<br>(ಕೆಳಗಿನ ಕೋಷ್ಟಕ)<br>**(ಬಿ) ಕಸ ಸಂಗ್ರಹಣೆ ಹಾಗೂ ಸಾಗಾಣಿಕೆ ವೆಚ್ಚ (ಜುಲೈ 2022 ಅಂತ್ಯಕ್ಕೆ)**<br>i. ವಾರ್ಷಿಕ ಮೀಸಲಿಟ್ಟಿರುವ ಮೊತ್ತ – ರೂ. 600.00 ಕೋಟಿಗಳು<br>ii. ಇದುವರೆಗೂ ಖರ್ಚಾಗಿರುವ ಮೊತ್ತ – ರೂ. 200.00 ಕೋಟಿಗಳು |
| ಉ | ಇದರ ನಿರ್ವಹಣೆಗೆ ಹೊಸ ತಾಂತ್ರಿಕತೆಯನ್ನು ಪಾಲಿಕೆಯಿಂದ ಗೊತ್ತುಪಡಿಸಲಾಗಿದೆಯೇ; ಹಾಗಿದ್ದಲ್ಲಿ, ಪಾಲಿಕೆ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? | ಘಟಕಗಳಲ್ಲಿ ಹೊಸ ತಾಂತ್ರಿಕತೆ ಹಾಗೂ ಸಂಶೋಧನೆ ಕೈಗೊಳ್ಳುವ ದಿಸೆಯಲ್ಲಿ ಸುಬ್ಬರಾಯನಪಾಳ್ಯ ಘಟಕದಲ್ಲಿ ನವೀನ ತಂತ್ರಜ್ಞಾನ / ವಿಧಾನಗಳಿಂದ ಕಸವನ್ನು ಸಂಸ್ಕರಣೆ ಮತ್ತು ಸಂಶೋಧನೆ ಮಾಡುವ ಕೆಲಸವನ್ನು ಪ್ರಾಯೋಗಿಕವಾಗಿ ಮೆ॥ ರುದ್ರಾಕ್ಷ ವೇಸ್ಟ್ ಯುಟಿಲಿಟೀಸ್ ಆರ್&ಡಿ ಪ್ರೈ. ಲಿ. ರವರಿಗೆ ವಹಿಸಲಾಗಿರುತ್ತದೆ. ಈ ಸಂಸ್ಥೆಯಿಂದ ಸಂಶೋಧನಾ ಅವಧಿ ಮುಗಿದ ನಂತರ ಸಂಶೋಧನ ಫಲಿತಾಂಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಹಂಚಿಕೊಳ್ಳಲು ಸದರಿ ಸಂಸ್ಥೆಗೆ ತಿಳಿಸಲಾಗಿರುತ್ತದೆ. |

(ಎ) ಕೋಷ್ಟಕ:

| ಕ್ರ.ಸಂ. | ಘಟಕದ ಹೆಸರು | ಘಟಕಗಳ ನಿರ್ವಹಣೆಯ ವಾರ್ಷಿಕ ವೆಚ್ಚ ಹಣ (ರೂ ಗಳಲ್ಲಿ) |
|---|---|---|
| 1. | ಚಿಕ್ಕನಾಗಮಂಗಲ | 5,36,94,672/- |
| 2. | ದೊಡ್ಡಬಿದರಕಲ್ಲು | 3,91,91,029/- |
| 3. | ಲಿಂಗಧೀರನಹಳ್ಳಿ | 68,00,000/- |
| 4. | ಸುಬ್ಬರಾಯನಪಾಳ್ಯ | 77,73,536/- |
| 5. | ಕೆ.ಸಿ.ಡಿ.ಸಿ | 3,93,00,000/- |

**ಸಂಖ್ಯೆ: ನಅಇ 724 ಎಂಎನ್‌ವೈ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ವಿಧಾನ ಪರಿಷತ್ತಿನ ಗುರುತಿನ ಪ್ರಶ್ನೆ ಸಂಖ್ಯೆ 367 ಕ್ಕೆ ಅನುಬಂಧ-1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಕನ್ನಹಳ್ಳಿಯಲ್ಲಿರುವ ಘನತ್ಯಾಜ್ಯ ಘಟಕದಲ್ಲಿನ 20 ಎಕರೆ ಜಾಗವನ್ನು 30 ವರ್ಷಗಳ ಅವಧಿಗೆ "ಉಪಯೋಗಕ್ಕೆ ಮಾತ್ರ (Permissive use only)" ಆಧಾರದ ಮೇಲೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: CI 263 SPI 2011, ದಿನಾಂಕ: 16-12-2011.
2. ಸರ್ಕಾರದ ಆದೇಶ ಸಂಖ್ಯೆ: ನಅಇ 603 ಎಂಎನ್‌ವೈ 2014, ದಿನಾಂಕ: 20-11-2014.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಕಾ.ಪಾ.ಅ-2/ಘ.ತ್ಯಾ.ನಿ-1/ಪಿ.ಆರ್/95/2018-19, ದಿನಾಂಕ: 05-07-2018.
4. ಸರ್ಕಾರದ ಸಮಸಂಖ್ಯೆ: ದಿನಾಂಕ: 11-09-2018.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಕಾ.ಪಾ.ಅ-2/ಘ.ತ್ಯಾ.ನಿ-1/ಪಿ.ಆರ್/272/2018-19, ದಿನಾಂಕ: 12-10-2018.
6. ಸರ್ಕಾರದ ಸಮಸಂಖ್ಯೆ: ದಿನಾಂಕ: 15-12-2018.
7. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಕಾ.ಪಾ.ಅ-2/ಘ.ತ್ಯಾ.ನಿ-1/ಪಿ.ಆರ್/272/2018-19, ದಿನಾಂಕ: 04-01-2019.
8. ಸರ್ಕಾರದ ಸಮಸಂಖ್ಯೆ: ದಿನಾಂಕ: 23-02-2019.
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಕಾ.ಪಾ.ಅ-2/ಘ.ತ್ಯಾ.ನಿ-1/ಪಿ.ಆರ್/272/2018-19, ದಿನಾಂಕ: 07-03-2019.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 16-12-2011ರ ಆದೇಶದಲ್ಲಿ ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಆಸಕ್ತಿ ಹೊಂದಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರದ "State High Level Committee" ಮುಂದೆ ಅನುಮೋದನೆಗಾಗಿ ದಿನಾಂಕ: 01-07-2011 ಸಲ್ಲಿಸಿದ್ದರು. ಈ ಮೇರೆಗೆ ಸರ್ಕಾರವು ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರ ಪ್ರಸ್ತಾವನೆಗೆ ದಿನಾಂಕ: 09-11-2011 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ 26ನೇ "State High Level Committee" ಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ಅನುಮೋದನೆಯಂತೆ ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ವಿದ್ಯುತ್

...2.

ಘಟಕ ಸ್ಥಾಪಿಸಲು ಅವಶ್ಯಕವಿರುವ 25 ಎಕರೆಗಳ ಜಾಗವನ್ನು ಹಾಗೂ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಒದಗಿಸಲು ಕ್ರಮವಹಿಸುವಂತೆ ಪಾಲಿಕೆಗೆ ತಿಳಿಸಲಾಗಿರುತ್ತದೆ.

2. ಸದರಿ State High Level Clearance Committee (SHLCC) ಸಭೆಯಲ್ಲಿ ತಿಳಿಸಿರುವಂತೆ, ಪಾಲಿಕೆಯ ಬಗ್ಗನದೊಡ್ಡಿ ಗ್ರಾಮದಲ್ಲಿ ಲಭ್ಯವಿರುವ 25 ಎಕರೆ ಪ್ರದೇಶವನ್ನು ಸದರಿ ಸಂಸ್ಥೆಗೆ ಒದಗಿಸಲು ಸ್ಥಳ ಪರಿಶೀಲನೆ ಮಾಡಲಾಗಿ, ಸದರಿ ಜಾಗವು ಬನ್ನೇರುಘಟ್ಟ ಕಾಡಿನ ಗಡಿಯಂಚಿನಲ್ಲಿದ್ದು, ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಯಾದಲ್ಲಿ ಕಾಡು ಪ್ರಾಣಿಗಳ ಓಡಾಟಕ್ಕೆ ತೊಂದರೆಯಾಗುವುದನ್ನು ಮನಗಂಡು ಮತ್ತು ಎಂ.ಎಸ್.ಡಬ್ಲ್ಯೂ ನಿಯಮಾವಳಿ 2000 ರಂತೆ ಕಾಡಿಗೆ ಹೊಂದಿಕೊಂಡಿರುವ ಜಾಗವನ್ನು ಘನತ್ಯಾಜ್ಯ ವಿಲೇವಾರಿಗೆ ಬಳಸಲು ಬಾರದಿರುವುದರಿಂದ ಬಗ್ಗನದೊಡ್ಡಿಯ ಪಾಲಿಕೆ ಜಾಗವನ್ನು ಸದರಿ ವಿದ್ಯುತ್ ಯೋಜನೆಗೆ ಒದಗಿಸಲಾಗಿರುವುದಿಲ್ಲ.

3. ಮೇಲೆ (2) ರಲ್ಲಿ ಓದಲಾದ ದಿನಾಂಕ: 20-11-2014ರ ಆದೇಶದಲ್ಲಿ ಮೆ॥ ಮಾಲ್ಟೋಸ್ ಅಗ್ರಿ ಪ್ರಾಡೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮೆ॥ ಸತಾರೆಂ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ ಗೋರೂರು ಗ್ರಾಮದಲ್ಲಿ ತಮ್ಮ ಸ್ವಂತ ಜಾಗದಲ್ಲಿ ಘನತ್ಯಾಜ್ಯ ನಿರ್ವಹಣೆ/ಸಂಸ್ಕರಣೆ ಘಟಕವನ್ನು ಸ್ಥಾಪಿಸಲು, ಕೆಲವೊಂದು ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿರುತ್ತದೆ.

4. ಮೇಲೆ (3) ರಲ್ಲಿ ಓದಲಾದ ದಿನಾಂಕ: 05-07-2018ರ ಪ್ರಸ್ತಾವನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾಗಡಿ ತಾಲ್ಲೂಕು ಗೊರೂರು ಗ್ರಾಮದಲ್ಲಿ ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಂದ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಸಂಬಂಧ ಸದರಿ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರೊಂದಿಗೆ ಚರ್ಚಿಸಲಾಗಿ, ಘಟಕ ಸ್ಥಾಪಿಸುವುದಕ್ಕೆ ಸ್ಥಳೀಯ ಗ್ರಾಮಸ್ಥರು ವಿರೋಧವನ್ನು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಸಭೆಯಲ್ಲಿ ಹಾಜರಿದ್ದ ಮುಖ್ಯ ಕಾರ್ಯದರ್ಶಿಗಳು ಪಾಲಿಕೆಯ ಹಾಲಿ ಚಾಲ್ತಿಯಲ್ಲಿರುವ ತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸುವ ಘಟಕವನ್ನು ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಹಸ್ತಾಂತರಿಸುವಂತೆ ಸಲಹೆ ನೀಡಿರುತ್ತಾರೆ.

5. ಅದರಂತೆ, ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಕನ್ನಹಳ್ಳಿ ಮತ್ತು ಸೀಗೇಹಳ್ಳಿಯಲ್ಲಿರುವ ಪಾಲಿಕೆಯ ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಭೇಟಿ ನೀಡಿ ಉಲ್ಲೇಖದ ರೀತ್ಯಾ ಪಾಲಿಕೆಗೆ ಪತ್ರವನ್ನು ನೀಡಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1. ಕನ್ನಹಳ್ಳಿ ಮತ್ತು ಸೀಗೇಹಳ್ಳಿಯಲ್ಲಿರುವ ಪಾಲಿಕೆಯ ಘನತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ವೀಕರಿಸಲು ಸಿದ್ದವಿರುವುದಾಗಿಯೂ ಹಾಗೂ ಸದರಿ ಘಟಕಗಳನ್ನು ಅಭಿವೃದ್ಧಿ ಪಡಿಸಲು ಅವಶ್ಯವಿರುವ ಸುಮಾರು ರೂ.12 ರಿಂದ ರೂ.14 ಕೋಟಿಗಳಷ್ಟು ಮೊತ್ತವನ್ನು ತಾವೇ ಭರಿಸುವುದಾಗಿ ತಿಳಿಸಿರುತ್ತಾರೆ.

2. ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ನಿರ್ಮಾಣ ಕಾರ್ಯವನ್ನೂ ಸಹ ಏಕಕಾಲದಲ್ಲಿ ಪ್ರಾರಂಭಿಸುವುದಾಗಿ ತಿಳಿಸಿರುತ್ತಾರೆ.

6. ಸದರಿ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಸರ್ಕಾರದಿಂದ ನೆರವನ್ನು ಕೋರಿರುತ್ತಾರೆ.

1. A Government order according approval for establishing an integrated municipal solid waste management inclusive of waste to energy (co-combustion / gasification) facility at Kannahalli (including Seegehalli).

. . .3.

2. Concession agreement between BBMP and Satarem Enterprises Private Limited mentioning the terms and conditions (similar to the one entered for establishing WtE at Gorur village) for establishing Integrated Waste to Energy facility of 700 Metric Tonnes per Day and above of Municipal Solid Waste at Kannahalli Village, Bengaluru North Taluk on BOOT Basis.

3. Prompt payment of tipping fee to sustain the project and mechanisms to ensure smooth running.

4. Bulk Generator / Commercial waste of minimum 100 tons per day to make it viable for us to meet O&M expenses.

5. Assistance in getting all the necessary approvals and licenses on a fast track for setting up of the waste to energy facility, as assured during the meeting.

7. ಮುಂದುವರೆದು, ಈಗಾಗಲೇ ಕನ್ನಹಳ್ಳಿಯಲ್ಲಿರುವ ಪಾಲಿಕೆಯ ಹಾಲಿ ಘನತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸುವ ಘಟಕದೊಂದಿಗೆ ಪ್ರತಿದಿನ 500 ಮೆ.ಟನ್ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾಧಿಸುವ ಘಟಕ ಸ್ಥಾಪಿಸಲು 5 ಭಾರಿ ಟೆಂಡರ್ ಆಹ್ವಾನಿಸಲಾಗಿದ್ದು, ಯಾವುದೇ ಗುತ್ತಿಗೆದಾರರು ಆಸಕ್ತಿ ತೋರಿರುವುದಿಲ್ಲ. ಆದುದರಿಂದ, ಪ್ರಸ್ತುತ ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಕನ್ನಹಳ್ಳಿಯಲ್ಲಿರುವ ಪಾಲಿಕೆಯ ಘನತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಹಸ್ತಾಂತರಿಸಿದಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಮುಂದೆ ಬಂದಿರುವುದರಿಂದ ಹಾಗೂ ಈಗಾಗಲೇ ಪಾಲಿಕೆಯು ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಸದರಿಯವರ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿರುತ್ತದೆಂದು ಪಾಲಿಕೆಯ ಆಯುಕ್ತರು ತಿಳಿಸಿರುತ್ತಾರೆ.

1. ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸಂಸ್ಕರಣಾ ಘಟಕವನ್ನು ಪ್ರಾರಂಭಿಸುವವರೆಗೂ, ಹಾಲಿ ಘನತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸುವ ಘಟಕವನ್ನು ಚಾಲನೆಮಾಡಿ ನಿರ್ವಹಣೆ ಮಾಡಲು ಪ್ರಸ್ತುತ ಸಂಸ್ಕರಣಾ ಘಟಕವನ್ನು ನಿರ್ವಹಣೆ ಮಾಡುತ್ತಿರುವ ಸಂಸ್ಥೆಗೆ ಪಾವತಿಸುತ್ತಿರುವ ಸಂಸ್ಕರಣಾ ಶುಲ್ಕವನ್ನು ಪಾವತಿಸಬಹುದಾಗಿರುತ್ತದೆ.
2. ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವು ಪ್ರಾರಂಭವಾದ ನಂತರ ಯಾವುದೇ ರೀತಿಯ ಸಂಸ್ಕರಣಾ ಶುಲ್ಕವನ್ನು ಪಾಲಿಕೆ ವತಿಯಿಂದ ಸಂಸ್ಥೆಯವರಿಗೆ ಪಾವತಿಸುವಂತಿಲ್ಲ.
3. ಕೆ.ಇ.ಆರ್.ಸಿ ಸಂಸ್ಥೆಯೊಂದಿಗೆ Power Purchase Agreement ಅನ್ನು ಮಾಡಿಕೊಳ್ಳುವುದು.
4. ಸರ್ಕಾರ/ ಪಾಲಿಕೆಯಿಂದ ಸಾಲ ಅಥವಾ ಅನುದಾನ ಇತರೆ ಯಾವುದೇ ಆರ್ಥಿಕ ಸಹಾಯವನ್ನು ನೀಡುವುದಿಲ್ಲ.
5. ಪಾಲಿಕೆ ವತಿಯಿಂದ ನಿರ್ಮಿಸಿದ ಗೊಬ್ಬರ ಸಂಸ್ಕರಣಾ ಘಟಕವನ್ನು ಹಸ್ತಾಂತರಿಸುತ್ತಿರುವುದರಿಂದ ಸದರಿ ಸಂಸ್ಥೆಯವರು ಉತ್ಪಾಧಿಸುವ ವಿದ್ಯುತ್ ಮಾರಾಟದಿಂದ ಬರುವ ಆದಾಯದಲ್ಲಿ ಪಾಲಿಕೆಗೆ Royalty ನೀಡುವ ಬಗ್ಗೆ ಸಂಸ್ಥೆಯವರಿಂದ ಮುಚ್ಚಳಿಕೆ ಪಡೆಯ ಬೇಕಾಗಿರುತ್ತದೆ.
6. ಪ್ರಸ್ತುತ ಉಪಯೋಗಕ್ಕೆ ಮಾತ್ರ (Permissive use only) ಆಧಾರದ ಮೇಲೆ ನೀಡುವ ಸ್ಥಳವನ್ನು/ ಶೆಡ್/ ಯಂತ್ರೋಪಕರಣಗಳು/ ಜಮೀನು ಯಾವುದೇ ರಾಷ್ಟ್ರೀಕೃತ/ಇತರೆ ಬ್ಯಾಂಕ್‌ಗಳಿಗೆ ಅಡಮಾನವಿಟ್ಟು ಸಾಲವನ್ನು ಪಡೆಯತಕ್ಕದ್ದಲ್ಲ.

. . .4.

7. ಪ್ರಸ್ತುತ ಉಪಯೋಗಕ್ಕೆ ಮಾತ್ರ (Permissive use only) ಆಧಾರದ ಮೇಲೆ ನೀಡುವ ಜಾಗವನ್ನು ಬೇರೆ ಯಾರಿಗೂ ಮರುಗುತ್ತಿಗೆ (Sub Lease) ಮಾಡುವಂತಿಲ್ಲ.
8. ಪ್ರಸ್ತುತ ಉಪಯೋಗಕ್ಕೆ ಮಾತ್ರ (Permissive use only) ಆಧಾರದ ಮೇಲೆ ನೀಡುವ ಜಾಗದಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕವನ್ನು ನಿಗಧಿತ ಸಮಯದಲ್ಲಿ ಸ್ಥಾಪಿಸಲು ಕ್ರಮವಹಿಸತಕ್ಕದ್ದು, ತಪ್ಪಿದ್ದಲ್ಲಿ ರದ್ದುಪಡಿಸುವ ಸಂಪೂರ್ಣ ಅಧಿಕಾರವು ಪಾಲಿಕೆಯದ್ದಾಗಿರುತ್ತದೆ.
9. ಕನ್ನಹಳ್ಳಿಯಲ್ಲಿನ ಚಾಲ್ತಿಯಲ್ಲಿರುವ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿರುವ ಹಾಲಿ ಇರುವ ಪಿ.ಇ.ಬಿ ಶೆಡ್‌ಗಳು ಹಾಗೂ ಯಂತ್ರೋಪಕರಣಗಳನ್ನು ಯಥಾಸ್ಥಿತಿಯಲ್ಲಿ 30 ವರ್ಷಗಳ ನಂತರ ಬಿ.ಬಿ.ಎಂ.ಪಿ.ಯು ತನ್ನ ವಶಕ್ಕೆ ಪಡೆಯುವುದು.

8. ಮೇಲೆ (4) ರಲ್ಲಿ ಓದಲಾದ ದಿನಾಂಕ: 11-09-2018ರ ಸರ್ಕಾರದ ಸಮಸಂಖ್ಯೆಯ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತಾವನೆಯನ್ನು ಪರಿಶೀಲಿಸಲು ಕೆಲವೊಂದು ಅಂಶಗಳಿಗೆ ಮಾಹಿತಿಯನ್ನು ನೀಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರನ್ನು ಕೋರಲಾಗಿತ್ತು.

9. ಮೇಲೆ (5) ರಲ್ಲಿ ಓದಲಾದ ದಿನಾಂಕ: 12-10-2018ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು ಕೋರಿರುವ ಅಂಶಗಳಿಗೆ ಮಾಹಿತಿಯನ್ನು ಒದಗಿಸುತ್ತಾ, ಪಾಲಿಕೆಯ ಕನ್ನಹಳ್ಳಿಯ ಘನತ್ಯಾಜ್ಯ ಸಂಸ್ಕರಣಾ ಘಟಕದ ಆವರಣದಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕ ಸ್ಥಾಪಿಸುವ ಮೆ॥ ಸತಾರೆಂ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

10. ಮೇಲೆ (6) ರಲ್ಲಿ ಓದಲಾದ ದಿನಾಂಕ: 15-12-2018ರ ಸರ್ಕಾರದ ಸಮಸಂಖ್ಯೆಯ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತಾವನೆಯನ್ನು ಪರಿಶೀಲಿಸಲು ಕೆಲವೊಂದು ಅಂಶಗಳಿಗೆ ಮಾಹಿತಿಯನ್ನು ನೀಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರನ್ನು ಕೋರಲಾಗಿತ್ತು.

11. ಮೇಲೆ (7) ರಲ್ಲಿ ಓದಲಾದ ದಿನಾಂಕ: 04-01-2019ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಕೋರಿರುವ ಮಾಹಿತಿಯನ್ನು ಒದಗಿಸುತ್ತಾ, ಪ್ರಸ್ತುತ ಪಾಲಿಕೆ ವತಿಯಿಂದ ನಿರ್ಮಿಸಿರುವ ಗೊಬ್ಬರ ಉತ್ಪಾದನಾ ಘಟಕದ ತಂತ್ರಾಂಶದಿಂದ ಗೊಬ್ಬರ ಉತ್ಪಾದನೆಗೆ ಹೆಚ್ಚು ಕಾಲಾವಕಾಶ ಬೇಕಾಗಿರುತ್ತದೆ. ಆದುದರಿಂದ, Backhus system ಅನ್ನು ಅಳವಡಿಸಿಕೊಂಡು ಗೊಬ್ಬರ ಉತ್ಪಾದನೆಯನ್ನು ತ್ವರಿತಗೊಳಿಸಬೇಕಾಗಿದ್ದು, ಇದಕ್ಕಾಗಿ ಹಾಲಿ ಶೆಡ್ಡನ್ನು ಮರು ವಿನ್ಯಾಸ ಮಾಡಿ, ಮಾರ್ಪಾಡು ಮಾಡಬೇಕಾಗಿದ್ದು ಇದಕ್ಕಾಗಿ ಹೆಚ್ಚಿನ ಸ್ಥಳದ ಅವಶ್ಯಕತೆಯಿರುತ್ತದೆಂದು ಸಂಸ್ಥೆಯವರು ತಿಳಿಸಿರುತ್ತಾರೆ. ಮುಂದುವರೆದು, ವ್ಯವಸಾಯಕ್ಕೆ ಯೋಗ್ಯವಾಗುವಂತೆ ಮತ್ತು ಮಣ್ಣಿನ ಪೌಷ್ಟಿಕಾಂಶವನ್ನು ಹೆಚ್ಚಿಸುವಂತೆ ಮಾಡಲು ಘನತ್ಯಾಜ್ಯದಿಂದ ಉತ್ಪತ್ತಿಯಾಗುವ ಗೊಬ್ಬರದಲ್ಲಿ Phosphate, Calcium, Potassium etc., ಅಂಶಗಳನ್ನು ಬೆರಸಬೇಕಾಗಿದ್ದು, ಇದಕ್ಕಾಗಿ ಅವಶ್ಯವಿರುವ ಮೂಲಭೂತ ಸೌಕರ್ಯವನ್ನು ಒದಗಿಸಲು ಹೆಚ್ಚುವರಿಯಾಗಿ 4.5 ಎಕರೆ ಜಾಗದ ಅವಶ್ಯಕತೆಯಿರುತ್ತದೆಂದು ಸಂಸ್ಥೆಯವರು ತಿಳಿಸಿದ್ದು, ಪಾಲಿಕೆಯ ಕನ್ನಹಳ್ಳಿಯ ಘನತ್ಯಾಜ್ಯ ಸಂಸ್ಕರಣಾ ಘಟಕದ ಆವರಣದಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕ ಸ್ಥಾಪಿಸುವ ಮೆ॥ ಸತಾರೆಂ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ

12. ಮೇಲೆ (8) ರಲ್ಲಿ ಓದಲಾದ ದಿನಾಂಕ: 23-02-2019ರ ಸರ್ಕಾರದ ಸಮ ಸಂಖ್ಯೆ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತಾವನೆಯನ್ನು ಪರಿಶೀಲಿಸಲು ಕೆಲವೊಂದು ಅಂಶಗಳಿಗೆ ಮಾಹಿತಿಯನ್ನು ನೀಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರನ್ನು ಕೋರಲಾಗಿತ್ತು.

. . .5.

13. ಮೇಲೆ (9) ರಲ್ಲಿ ಓದಲಾದ ದಿನಾಂಕ: 07–03–2019ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು, ಕೋರಿರುವ ಮಾಹಿತಿಯನ್ನು ಒದಗಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ದಿನಾಂಕ: 07–03–2019ರ ಪತ್ರದಲ್ಲಿ ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಿರುತ್ತಾರೆ.

| ಕ್ರಮ ಸಂಖ್ಯೆ | ಕೋರಿರುವ ಮಾಹಿತಿ | ಪಾಲಿಕೆಯ ಉತ್ತರ |
|---|---|---|
| 1 | The Technical Guidance Committee in BBMP must scrutinize the project details and must give a go-ahead to the project. | ಕನ್ನಹಳ್ಳಿಯಲ್ಲಿರುವ ಪಾಲಿಕೆಯ ಘನತ್ಯಾಜ್ಯ ಸಂಸ್ಕರಣಾ ಘಟಕದ ಅವರಣದಲ್ಲಿ ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಂದ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುವ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಘಟಕದ ವಿವರವಾದ ಯೋಜನಾ ವರದಿಯ ಪ್ರಾತ್ಯಕ್ಷತೆಯನ್ನು ದಿನಾಂಕ: 02–03–2019 ರಂದು ನಡೆದ Technical Guidance Committee ಸಮಿತಿ ಸಭೆಯ ಮುಂದೆ ನೀಡಲಾಗಿದ್ದು, ಸಮಿತಿಯ ಅಭಿಪ್ರಾಯವನ್ನು ಅನುಬಂಧ–I ರಲ್ಲಿ ಒದಗಿಸಿದೆ |
| 2 | BBMP have to take a fair call on whether "Permissive Use" lease for 30 years is necessary or should a shorter lease be agreed to. | ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರವೇಟ್ ಲಿಮಿಟೆಡ್ ಸಂಸ್ಥೆಯವರು ಸ್ಥಾಪಿಸಲು ಉದ್ದೇಶಿಸಿರುವ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕಕ್ಕೆ ಅವಶ್ಯವಿರುವ ಒಟ್ಟಾರೆ ಯೋಜನಾ ವೆಚ್ಚವನ್ನು ಸದರಿ ಸಂಸ್ಥೆಯವರೇ ಭರಿಸುತ್ತಿದ್ದು, ಸದರಿ ಸಂಸ್ಥೆಯವರು ಘಟಕ ನಿರ್ಮಾಣ ಮತ್ತು ನಿರ್ವಹಣೆ ಗಾಗಿ ವ್ಯಯಿಸುವ ಮೊತ್ತದ Cost Recovery ಗಾಗಿ 30 ವರ್ಷಗಳಾಗುವುದೆಂದು ಸಂಸ್ಥೆಯವರು ತಿಳಿಸಿರುವುದರಿಂದ, 30 ವರ್ಷಗಳ ಅವಧಿಗೆ "Permissive use only" ಆಧಾರದ ಮೇಲೆ ಮೆ॥ ಸತ್ತಾರೆಂ ಎಂಟರ್ ಪ್ರೈಸೆಸ್ ಪ್ರವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಸ್ಥಳವನ್ನು ಹಸ್ತಾಂತರಿಸಬಹುದಾಗಿರುತ್ತದೆ. |
| 3 | Since conversion of Waste to Energy will lead to monetization through selling of electricity, tipping fee must not be collected. | ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು 21 ತಿಂಗಳುಗಳ ಆವಶ್ಯಕತೆಯಿದ್ದು, ಸದರಿ ಅವಧಿಯಲ್ಲಿ ಹಾಲಿ ಇರುವ ಘನತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಗೊಬ್ಬರ ಉತ್ಪಾಧಿಸುವ ಘಟಕ) ಪಾಲಿಕೆಯ ವತಿಯಿಂದ ಸುಮಾರು 500 ಮೆ.ಟನ್ ತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುವುದಾಗಿ ತಿಳಿಸಿರುತ್ತಾರೆ. ಇದಕ್ಕಾಗಿ ಪಾಲಿಕೆ ವತಿಯಿಂದ ಇತರೆ ತ್ಯಾಜ್ಯ ಸಂಸ್ಕರಣಾ ಘಟಕವನ್ನು ನಿರ್ವಹಣೆ ಮಾಡುತ್ತಿರುವ ಸಂಸ್ಥೆಗಳಿಗೆ ಪಾವತಿಸುತ್ತಿರುವಂತೆ ಸಂಸ್ಕರಣಾ ಶುಲ್ಕವನ್ನು (Tipping Fee) ಪಾವತಿಸಲು ಕೋರಿರುತ್ತಾರೆ ಹಾಗೂ ಟಿಪ್ಪಿಂಗ್ ಶುಲ್ಕದ ಬಗ್ಗೆ ಕೆಳಕಂಡಂತೆ ತಿಳಿಸಿರುತ್ತಾರೆ.<br>We wish keep you informed that we would start accepting mixed Waste of 500-700 TPD, |

. . .6.

| | | |
|---|---|---|
| | | after a month of signing the concession agreement and thereafter establish the waste toi energy in 21 months.<br><br>Till such time the waste to energy is established, we would want a processing fee paid to us in similar lines to what is being paid to the existing concessioners. After establishing the waste to energy facility, the tipping fee could be stopped. |

14. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಪಾಲಿಕೆಯ ಕನ್ನಹಳ್ಳಿ ಘನತ್ಯಾಜ್ಯ ಸಂಸ್ಕರಣಾ ಘಟಕದ ಆವರಣದಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕ ಹಾಗೂ ಇತರೆ ಮೂಲಭೂತ ಸೌಕರ್ಯವನ್ನು ಸ್ಥಾಪಿಸುವ ಮೆ॥ ಸತಾರೆಂ ಎಂಟರ್ ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಹಾಗೂ ಕರ್ನಾಟಕ ಪಾರದರ್ಶಕ ಅಧಿನಿಯಮದಡಿ 4(ಜಿ) ವಿನಾಯಿತಿ ನೀಡುವಂತೆ ಪಾಲಿಕೆಯ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಶವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ನಅಇ 285 ಎಂಎನ್‌ವೈ 2014,**
**ಬೆಂಗಳೂರು, ದಿನಾಂಕ: 19-08-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಕನ್ನಹಳ್ಳಿಯಲ್ಲಿನ 5 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಶೆಡ್ ಮತ್ತು ಉಳಿದ 15 ಎಕರೆ ಒಟ್ಟು 20 ಎಕರೆ ಜಾಗವನ್ನು 30 ವರ್ಷಗಳ ಅವಧಿಗೆ "ಉಪಯೋಗಕ್ಕೆ ಮಾತ್ರ (Permissive use only)" ಆಧಾರದ ಮೇಲೆ ನೀಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

ಷರತ್ತುಗಳು:

1. ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸಂಸ್ಕರಣಾ ಘಟಕವನ್ನು ಪ್ರಾರಂಭಿಸುವವರೆಗೂ, ಹಾಲಿ ಘನತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸುವ ಘಟಕವನ್ನು ಚಾಲನೆ ಮಾಡಿ ನಿರ್ವಹಣೆ ಮಾಡಲು ಪ್ರಸ್ತುತ ಸಂಸ್ಕರಣಾ ಘಟಕವನ್ನು ನಿರ್ವಹಣೆ ಮಾಡುತ್ತಿರುವ ಸಂಸ್ಥೆಗೆ ಪಾವತಿಸುತ್ತಿರುವ ಸಂಸ್ಕರಣಾ ಶುಲ್ಕವನ್ನು ಪಾವತಿಸಬಹುದಾಗಿರುತ್ತದೆ.
2. ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವು ಪ್ರಾರಂಭವಾದ ನಂತರ ಯಾವುದೇ ರೀತಿಯ ಸಂಸ್ಕರಣಾ ಶುಲ್ಕವನ್ನು ಪಾಲಿಕೆ ವತಿಯಿಂದ ಸಂಸ್ಥೆಯವರಿಗೆ ಪಾವತಿಸುವಂತಿಲ್ಲ.
3. ಕೆ.ಇ.ಆರ್.ಸಿ ಸಂಸ್ಥೆಯೊಂದಿಗೆ Power Purchase Agreement ಅನ್ನು ಮಾಡಿಕೊಳ್ಳುವುದು.

. . .7.

4. ಸರ್ಕಾರ/ ಪಾಲಿಕೆಯಿಂದ ಸಾಲ ಅಥವಾ ಅನುದಾನ ಇತರೆ ಯಾವುದೇ ಆರ್ಥಿಕ ಸಹಾಯವನ್ನು ನೀಡುವುದಿಲ್ಲ.
5. ಪಾಲಿಕೆ ವತಿಯಿಂದ ನಿರ್ಮಿಸಿದ ಗೊಬ್ಬರ ಸಂಸ್ಕರಣಾ ಘಟಕವನ್ನು ಹಸ್ತಾಂತರಿಸುತ್ತಿರುವುದರಿಂದ ಸದರಿ ಸಂಸ್ಥೆಯುವಗು ಉತ್ಪಾದಿಸುವ ವಿದ್ಯುತ್ ಮಾರಾಟದಿಂದ ಬರುವ ಆದಾಯದಲ್ಲಿ ಪಾಲಿಕೆಗೆ Royalty ನೀಡುವ ಬಗ್ಗೆ ಸಂಸ್ಥೆಯವರಿಂದ ಮುಚ್ಚಳಿಕೆ ಪಡೆಯಬೇಕಾಗಿರುತ್ತದೆ.
6. Permissive use only ಆಧಾರದ ಮೇಲೆ ನೀಡುವ ಸ್ಥಳವನ್ನು / ಶೆಡ್/ ಯಂತ್ರೋಪಕರಣಗಳು/ ಜಮೀನು ಯಾವುದೇ ರಾಷ್ಟ್ರೀಕೃತ / ಇತರೆ ಬ್ಯಾಂಕ್‌ಗಳಿಗೆ ಅಡಮಾನವಿಟ್ಟು ಸಾಲವನ್ನು ಪಡೆಯತಕ್ಕದ್ದಲ್ಲ.
7. Permissive use only ಆಧಾರದ ಮೇಲೆ ನೀಡುವ ಜಾಗವನ್ನು ಬೇರೆ ಯಾರಿಗೂ ಮರುಗುತ್ತಿಗೆ (Sub Lease) ಮಾಡುವಂತಿಲ್ಲ.
8. Permissive use only ಆಧಾರದ ಮೇಲೆ ನೀಡುವ ನೀಡುವ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕವನ್ನು ನಿಗಧಿತ ಸಮಯದಲ್ಲಿ ಸ್ಥಾಪಿಸಲು ಕ್ರಮ ವಹಿಸತಕ್ಕದ್ದು, ತಪ್ಪಿದ್ದಲ್ಲಿ ರದ್ದುಪಡಿಸುವ ಸಂಪೂರ್ಣ ಅಧಿಕಾರವು ಪಾಲಿಕೆಯದ್ದಾಗಿರುತ್ತದೆ.
9. ಕನ್ನಹಳ್ಳಿಯಲ್ಲಿನ ಚಾಲ್ತಿಯಲ್ಲಿರುವ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿರುವ ಹಾಲಿ ಇರುವ ಪಿ.ಇ.ಬಿ ಶೆಡ್‌ಗಳು ಹಾಗೂ ಯಂತ್ರೋಪಕರಣಗಳನ್ನು ಯಥಾಸ್ಥಿತಿಯಲ್ಲಿ 30 ವರ್ಷಗಳ ನಂತರ ಬಿ.ಬಿ.ಎಂ.ಪಿ.ಯು ತನ್ನ ವಶಕ್ಕೆ ಪಡೆಯುವುದು.

ಈ ಆದೇಶವನ್ನು ದಿನಾಂಕ: 14-08-2019 ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ: 473/2019 ರಲ್ಲಿ ಕೈಗೊಂಡ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎಸ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ವಿಷಯ ಸಂಖ್ಯೆ: ಸಿ: 473/2018, ದಿನಾಂಕ: 14-08-2019).

8. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
12. ಸರ್ಕಾರದ ಉಪ ಕಾರ್ಯದರ್ಶಿಗಳು–3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
13. ಅಧೀಕ್ಷಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 367 ಕ್ಕೆ 864
ಅನುಬಂಧ-2

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: M/s MSGP Infra tech Private Limited ಸಂಸ್ಥೆಯವರು ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಗರನಹಳ್ಳಿ ಗ್ರಾಮದ ಸರ್ವೆ ನಂ.1, 2, 3, 7 & 11 8 ಪೈ ಪಿ1 ಗಳಲ್ಲಿನ ತಮ್ಮ ಸ್ವಂತ ಜಮೀನಿನಲ್ಲಿ ಘನತ್ಯಾಜ್ಯ ನಿರ್ವಹಣೆ/ಸಂಸ್ಕರಣೆ ಘಟಕವನ್ನು ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಇವರ ಪತ್ರ ಸಂಖ್ಯೆ: ಕಾ.ಪಾ.ಅ-3/ಘ.ತ್ಯಾ.ನಿ-1/ಪಿಆರ್/34/2013-14, ದಿನಾಂಕ: 09-04-2013
2) ದಿನಾಂಕ: 02-07-2013 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.
3) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಇವರ ಪತ್ರ ಸಂಖ್ಯೆ:ಕಾ.ಪಾ.ಅ-2/ಘ.ತ್ಯಾ.ನಿ-1/ಪಿಆರ್/250/2012-13, ದಿನಾಂಕ:28-09-2013.

-----------

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಸುಮಾರು 4000 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದನ್ನು ವಿಲೇವಾರಿ ಮಾಡುವುದು ಪಾಲಿಕೆಯ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ಈ ಕೆಳಕಂಡ ಸ್ಥಳಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗಿದೆ.

1. ಮಾವಳ್ಳಿಪುರ – 600 ಮೆ.ಟನ್
2. ಮಂಡೂರು (ಉತ್ತರ) – 300 ಮೆ.ಟನ್
3. ಮಂಡೂರು (ದಕ್ಷಿಣ) – 1000 ಮೆ.ಟನ್
4. ಗುಂಡ್ಲಹಳ್ಳಿ – 1000 ಮೆ.ಟನ್
5. ಚೀಮಸಂದ್ರ – 300 ಮೆ.ಟನ್
6. ಎಸ್.ಬಿಂಗಿಪುರ – 500 ಮೆ.ಟನ್

2. ಮೇಲ್ಕಂಡ ಸ್ಥಳಗಳ ಪೈಕಿ ಚೀಮಸಂದ್ರ ಘಟಕವನ್ನು ಮುಚ್ಚಲಾಗಿದ್ದು, ಮಾವಳ್ಳಿಪುರ ಘಟಕದ ಬಗ್ಗೆ ಸಾರ್ವಜನಿಕರಿಂದ ಪ್ರತಿಭಟನೆ ಎದುರಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶದಂತೆ ಸ್ಥಗಿತಗೊಳಿಸಲಾಗಿದೆ. ಉಳಿದ 04 ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ನಗರದಲ್ಲಿ ಗಣನೀಯ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ನಿರ್ವಹಿಸಬೇಕಾಗಿರುವುದರಿಂದ, ಮೇಲ್ಕಂಡ ಘಟಕಗಳಲ್ಲಿ ಒತ್ತಡ ಜಾಸ್ತಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಕೆಳಕಂಡ ಸ್ಥಳಗಳಲ್ಲಿ ಹೊಸದಾಗಿ ಘನತ್ಯಾಜ್ಯ ನಿರ್ವಹಣೆ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಬಂಧ ಕೆಳಕಂಡ ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ:

1. ಸುಬ್ಬರಾಯನಪಾಳ್ಯ – 750 ಮೆ.ಟನ್ – (ಮೆ॥ ಹಂಜೀರ್)
2. ಮಂಡೂರು – 1000 ಮೆ.ಟನ್ – (ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್)
3. ಗೋರೂರು ಹಳ್ಳಿ, ಮಾಗಡಿ ತಾಲ್ಲೂಕು 600 ಮೆ.ಟನ್ – (ಮೆ॥ಸತಾರೆಂ ಎಂಟರ್‌ಪ್ರೈಸಸ್)

ಉಳಿದಂತೆ ಕನ್ನಹಳ್ಳಿಯಲ್ಲಿ 500 ಮೆ.ಟನ್ ಕಸ ವಿಲೇವಾರಿ ಘಟಕ ಸ್ಥಾಪಿಸಲು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

3. ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಬೆಂಗಳೂರು ನಗರದಲ್ಲಿ ಇತ್ತೀಚೆಗೆ ತಲೆದೋರಿರುವ ಸಮಸ್ಯೆಯನ್ನು ಮುಂದಿನ ದಿನಗಳಲ್ಲಿ ತಡೆಗಟ್ಟುವ ಉದ್ದೇಶದಿಂದ ಪರ್ಯಾಯ ಕ್ರಮವಾಗಿ ದೀರ್ಘಕಾಲಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಅವಶ್ಯಕತೆಯಿರುವುದರಿಂದ ಹೆಚ್ಚುವರಿ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಪಾಲಿಕೆಗೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಸ್ವಂತ ಜಾಗ ಹೊಂದಿರುವವರಿಂದ ಘನತ್ಯಾಜ್ಯ ನಿರ್ವಹಣೆ ಘಟಕವನ್ನು ಸ್ಥಾಪಿಸಲು ಆಸಕ್ತಿ ಇರುವವರಿಂದ ದಿನಾಂಕ: 08.02.2013 ರಂದು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿ ದಿನಾಂಕ: 08.03.2013 ರಂದು ಕಡೆಯ ದಿನಾಂಕವನ್ನು ನಿಗಧಿಪಡಿಸಲಾಗಿದ್ದು, ಟೆಂಡರ್‌ನ್ನು ದಿನಾಂಕ: 13.03.2013ರಂದು ತೆರೆಯಲಾಗಿ, M/s MSGP Infra tech Private Limited ರವರು ಮಾತ್ರ ಟೆಂಡರ್‌ನ್ನು ಸಲ್ಲಿಸಿರುತ್ತಾರೆ.

4. ಬೆಂಗಳೂರು ನಗರದ ಇತ್ತೀಚಿನ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಏಕೈಕ ಬಿಡ್ದುದಾರರಾದ M/s MSGP Infra tech Private Limited ರವರ ಟೆಂಡರ್‌ನ್ನು ಪರಿಗಣಿಸಲು ಉದ್ದೇಶಿಸಲಾಗಿದ್ದು, ಇವರ ತಾಂತ್ರಿಕ ಬಿಡ್ಡನ್ನು ಪರಿಶೀಲಿಸಲು ಕೆಳಕಂಡ ಅಧಿಕಾರಿಗಳ ತಂಡವನ್ನು ರಚಿಸಲಾಗಿರುತ್ತದೆ:

| | | |
|---|---|---|
| 1 | ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) | ಅಧ್ಯಕ್ಷರು |
| 2 | ಅಪರ ಆಯುಕ್ತರು (ಘ.ತ್ಯಾ.ನಿ) | ಸದಸ್ಯರು |
| 3 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-1 | ಸದಸ್ಯರು |
| 4 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-2 | ಸದಸ್ಯರು |
| 5 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-3 | ಸದಸ್ಯರು |
| 6 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-4 | ಸದಸ್ಯರು |
| 7 | ಮುಖ್ಯ ಅಭಿಯಂತರರು, ಟಿ.ವಿ.ಸಿ.ಸಿ | ಸದಸ್ಯರು |
| 8 | ಮುಖ್ಯ ಲೆಕ್ಕಾಧಿಕಾರಿಗಳು | ಸದಸ್ಯರು |
| 9 | ಕಾನೂನು ಕೋಶದ ಮುಖ್ಯಸ್ಥರು | ಸದಸ್ಯರು |

5. ಮೇಲ್ಕಂಡ ಸಮಿತಿಯು ದಿನಾಂಕ: 22.03.2013 ರಂದು ಸಭೆ ನಡೆಸಿದ್ದು, ಬೆಂಗಳೂರು ನಗರದ ಇತ್ತೀಚಿನ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತಹ ಸಮಸ್ಯೆ ಹಾಗೂ ನ್ಯಾಯಾಲಯದಲ್ಲಿ ಹೂಡಲಾದ ದಾವೆಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ M/s MSGP Infra tech Private Limited ರವರು ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ಪಡೆದುಕೊಂಡಿರುವ ನಿರಾಕ್ಷೇಪಣಾ ಪತ್ರ, ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪಡೆಯಲಾಗಿರುವ Authorization, ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯದಿಂದ ಪಡೆದಿರುವ ಒಪ್ಪಿಗೆ ಪತ್ರಗಳನ್ನೆಲ್ಲಾ ಪರಿಗಣಿಸಿ, ಇವರು ಸಲ್ಲಿಸಿರುವ ತಾಂತ್ರಿಕ ಪ್ರಸ್ತಾವನೆಯನ್ನು ಒಪ್ಪಿ ಆರ್ಥಿಕ ಬಿಡ್ಡನ್ನು ತೆರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಅದರಂತೆ ಇವರ ಆರ್ಥಿಕ ಬಿಡ್ಡನ್ನು ದಿನಾಂಕ: 26.03.2013 ರಂದು ತೆರೆದು ಪರಿಶೀಲಿಸಿದಾಗ Processing Fee/Tipping Fee ಬಾಬ್ತಿಗಾಗಿ ಇವರು ನಮೂದಿಸಿರುವ ದರವು ಪ್ರತಿ

ಕ 66



ಮೆ.ಟನ್‌ಗೆ ರೂ.171.00 ಗಳಾಗಿದ್ದು, ಅದರಂತೆ ಘನತ್ಯಾಜ್ಯ ಸಂಸ್ಕರಣೆಗೆ ತಗಲುವ ವೆಚ್ಚದ ವಿವರಗಳು ಕೆಳಕಂಡಂತಿವೆ:

1. ಸಂಸ್ಕರಣಾ ಶುಲ್ಕ (Processing Fee/Tipping fee) = ರೂ. 171/- ಪ್ರತಿ ಮೆಟ್ರಿಕ್ ಟನ್‌ಗೆ
2. ಪ್ರತಿದಿನದ ಘನತ್ಯಾಜ್ಯ ಸಂಸ್ಕರಣೆ = 500 ಮೆ.ಟನ್
3. ಪ್ರತಿದಿನದ 500 ಮೆ.ಟನ್ ಘನತ್ಯಾಜ್ಯ ಸಂಸ್ಕರಣಾ ವೆಚ್ಚ = ರೂ. 85,500/-
4. ಪ್ರತಿ ತಿಂಗಳ ಘನತ್ಯಾಜ್ಯ ಸಂಸ್ಕರಣಾ ವೆಚ್ಚ = ರೂ. 25,65,000/-
5. ಪ್ರತಿ ವಾರ್ಷಿಕ ಘನತ್ಯಾಜ್ಯ ಸಂಸ್ಕರಣಾ ವೆಚ್ಚ = ರೂ. 3,12,07,500/-

6. ಸದರಿ ಟೆಂಡರನ್ನು 20 ವರ್ಷಗಳ ಅವಧಿಗೆ ಕರೆಯಲಾಗಿದ್ದು, 20 ವರ್ಷಗಳ ನಂತರ 15 ವರ್ಷಗಳ ಅವಧಿಗೆ Post Closure ನಿರ್ವಹಣೆಯನ್ನು ಯಶಸ್ವಿ ಬಿಡ್ಡುದಾರರಾದ M/s MSGP Infra tech Private Limited ರವರು ನಿರ್ವಹಿಸಬೇಕಾಗಿರುತ್ತದೆ. ಇವರು ನಮೂದಿಸಿರುವ ದರವನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಶೇ.10 ರಷ್ಟು ಹೆಚ್ಚಿಸಲು ಅವಕಾಶ ಕಲ್ಪಿಸಲಾಗಿದೆ. ಇವರಿಗೆ ವರ್ಷವಾರು ಪಾವತಿಸಬೇಕಾಗಿರುವ ಮೊತ್ತದ ವಿವರವು ಕೆಳಕಂಡಂತಿರುತ್ತದೆ:

| Sl No | Particulars | Amount | Cumulative amount |
|---|---|---|---|
| 1 | 1st Year | 31,207,500 | 31,207,500 |
| 2 | 2nd Year | 31,207,500 | 62,415,000 |
| 3 | 3rd Year | 31,207,500 | 93,622,500 |
| 4 | 4th Year | 34,328,250 | 127,950,750 |
| 5 | 5th Year | 34,328,250 | 162,279,000 |
| 6 | 6th Year | 34,328,250 | 196,607,250 |
| 7 | 7th Year | 37,449,000 | 234,056,250 |
| 8 | 8th Year | 37,449,000 | 271,505,250 |
| 9 | 9th Year | 37,449,000 | 308,954,250 |
| 10 | 10th Year | 40,569,750 | 349,524,000 |
| 11 | 11th Year | 40,569,750 | 390,093,750 |
| 12 | 12th Year | 40,569,750 | 430,663,500 |
| 13 | 13th Year | 43,690,500 | 474,354,000 |
| 14 | 14th Year | 43,690,500 | 518,044,500 |
| 15 | 15th Year | 43,690,500 | 561,735,000 |
| 16 | 16th Year | 46,811,250 | 608,546,250 |
| 17 | 17th Year | 46,811,250 | 655,357,500 |
| 18 | 18th Year | 46,811,250 | 702,168,750 |
| 19 | 19th Year | 49,932,000 | 752,100,750 |
| 20 | 20th Year | 49,932,000 | 802,032,750 |

ಗುತ್ತಿಗೆದಾರರು ಸ್ಥಾಪಿಸುವ ಘಟಕಕ್ಕೆ ಘನತ್ಯಾಜ್ಯವನ್ನು ಒದಗಿಸುವ ಜವಾಬ್ದಾರಿ ಪಾಲಿಕೆಯದ್ದಾಗಿರುತ್ತದೆ ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಪಾಲಿಕೆ ವತಿಯಿಂದಲೇ ಭರಿಸಬೇಕಾಗಿದೆ.

....4

7. M/s MSGP Infra tech Private Limited ಸಂಸ್ಥೆಯವರು ಸ್ಥಾಪಿಸಬೇಕಿರುವ ಘಟಕದಲ್ಲಿ ಕೆಳಕಂಡ ನಿಬಂಧನೆಗಳನ್ನು ಪಾಲಿಸಬೇಕಾಗಿರುತ್ತದೆ:

(1) ಎಂ.ಎಸ್.ಡಬ್ಲ್ಯೂ 2000 ನಿಯಮಾವಳಿಗಳ ರೀತ್ಯ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸುವ ನಿಯಮಾವಳಿಗಳ ರೀತ್ಯ ಘನತ್ಯಾಜ್ಯ ನಿರ್ವಹಣೆಯನ್ನು ಸಂಸ್ಕರಣೆ ಮತ್ತು / ಅಥವಾ ನಿರ್ವಹಣೆ ಮಾಡಬೇಕಾಗಿರುತ್ತದೆ.

(2) ಲ್ಯಾಂಡ್‌ಫಿಲ್‌ನಲ್ಲಿ ತುಂಬುವ Inerts ನ ಪ್ರಮಾಣವು ಶೇ.15 ಕ್ಕೆ ಮೀರಬಾರದು.

(3) ವಾಸನೆ, ಲೀಚೆಟ್ ಹಾಗೂ ಇದರಿಂದಾಗಿ ನೊಣ, ಸೊಳ್ಳೆಗಳ ಹಾವಳಿ ನಿಯಂತ್ರಿಸಲು ಸೂಕ್ತಕ್ರಮ ಕೈಗೊಳ್ಳುವುದು ಮತ್ತು Closed shed ನಲ್ಲಿ ನಿರ್ವಹಣೆ ಮಾಡುವುದು.

(4) ತ್ಯಾಜ್ಯ ಸಂಸ್ಕರಣೆಯು ತೃಪ್ತಿಕರವಾಗಿರದಿದ್ದಲ್ಲಿ ಸೂಕ್ತ ದಂಡ ವಿಧಿಸುವುದು.

8. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಮೇಲೆ (1)ರಲ್ಲಿ ಓದಲಾದ ದಿನಾಂಕ: 09-04-2013 ರ ಪತ್ರದಲ್ಲಿ ಪಾಲಿಕೆಯು ಘನತ್ಯಾಜ್ಯ ನಿರ್ವಹಣೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿಗಳು ದಾಖಲಾಗಿದ್ದು, ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದಲ್ಲಿ ಕಸ ವಿಲೇವಾರಿ ಮಾಡಲು ವೈಜ್ಞಾನಿಕ ಸಂಸ್ಕರಣಾ ಘಟಕಗಳನ್ನು ತ್ವರಿತಗತಿಯಲ್ಲಿ ಸ್ಥಾಪಿಸಲು ಪಾಲಿಕೆಗೆ ಆದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ದುದಾರರಾದ M/s MSGP Infra tech Private Limited ಸಂಸ್ಥೆಯವರು ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಗರನಹಳ್ಳಿ ಗ್ರಾಮದ ಸರ್ವೆ ನಂ.1,2,3,7&11 8 ಪೈ ಖಿ1 ಗಳಲ್ಲಿನ ತಮ್ಮ ಸ್ವಂತ ಜಮೀನಿನಲ್ಲಿ ಪ್ರತಿದಿನಕ್ಕೆ 500 ಮೆ.ಟನ್ ಸಾಮರ್ಥ್ಯದ ಘನತ್ಯಾಜ್ಯ ನಿರ್ವಹಣೆ/ಸಂಸ್ಕರಣೆ ಘಟಕವನ್ನು ಸ್ಥಾಪಿಸಲು ಹಾಗೂ ಗುತ್ತಿಗೆದಾರರಿಗೆ ಪ್ರತಿ ಮೆಟ್ರಿಕ್ ಟನ್ನಿಗೆ ರೂ.171.00 ಗಳ ಸಂಸ್ಕರಣಾ/ಟಿಪ್ಪಿಂಗ್ ಶುಲ್ಕವನ್ನು ಪಾವತಿಸುವ ಬಗ್ಗೆ ಹಾಗೂ ಪ್ರತಿ ಮೂರು ವರ್ಷಗಳಿಗೆ ಶೇ.10 ರಷ್ಟು ದರವನ್ನು ಹೆಚ್ಚಿಸುವ ಪ್ರಸ್ತಾವನೆಗೆ ದಿನಾಂಕ: 31.07.2013ರಂದು ನಡೆದ ಪಾಲಿಕೆಯ ಕೌನ್ಸಿಲ್ ಸಭೆಯು ವಿಷಯ ಸಂಖ್ಯೆ: 1(10) 2013-14ರಲ್ಲಿ ಅನುಮೋದನೆ ನೀಡಿರುವುದರಿಂದ, ಈ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

9. ಪ್ರಸ್ತಾವನೆಯನ್ನು ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 575 ಎಂಎನ್‌ವೈ 2010, ದಿನಾಂಕ: 06-08-2010 ರಲ್ಲಿ ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಉನ್ನತಾಧಿಕಾರ ಸಮಿತಿ ಸಭೆಯ ಮುಂದೆ ದಿನಾಂಕ: 02-07-2013 ರಂದು ಮಂಡಿಸಲಾಗಿತ್ತು. ಸಮಿತಿಯು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಷರತ್ತುಗಳೊಂದಿಗೆ M/s MSGP Infra tech Private Limited ಸಂಸ್ಥೆಯವರು ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಗರನಹಳ್ಳಿ ಗ್ರಾಮದ ಸರ್ವೆ ನಂ.1,2,3,7 & 11 8 ಪೈ ಖಿ1 ಗಳಲ್ಲಿನ ತಮ್ಮ ಸ್ವಂತ ಜಮೀನಿನಲ್ಲಿ ಘನತ್ಯಾಜ್ಯ ನಿರ್ವಹಣೆ/ಸಂಸ್ಕರಣೆ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಬಹುದೆಂದು ಒಪ್ಪಿಗೆ ನೀಡಿರುತ್ತದೆ:

(1) Entire processing of MSW shall be done in closed environment.

(2) Greenery (buffer zone) shall be developed around the site.

(3) Entire Property shall be fenced.

(4) Preference shall be given to the local people for the employment.

(5) It is the responsibility of the agency to ensure good relationship with local residents.
(6) Existing pollution control morms shall be strictly adhered to.
(7) Pollution level shall be monitored frequently.
(8) Company shall adhere to the instructions/policies/ orders issued by the Government or other Authorities, from time to time
(9) The Company shall appoint a full time Environment Engineer for the plant.
(10) The Company shall receive and commence the processing of MSW within six months of signing the agreement.

10. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯವನ್ನು ಸಮರ್ಪಕವಾಗಿ ಹಾಗೂ ವೈಜ್ಞಾನಿಕವಾಗಿ ಭಾರತ ಸರ್ಕಾರವು ರೂಪಿಸಿರುವ ಮುನ್ಸಿಪಲ್ ಘನತ್ಯಾಜ್ಯ (ವ್ಯವಸ್ಥಾಪನೆ ಹಾಗೂ ನಿರ್ವಹಣೆ) ನಿಯಮಗಳು 2000 ರನ್ವಯ ವಿಲೇವಾರಿ ಮಾಡುತ್ತಿಲ್ಲವಾದ್ದರಿಂದ ಈ ಬಗ್ಗೆ ಸರ್ಕಾರ ಹಾಗೂ ಪಾಲಿಕೆಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಹಲವು ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿಗಳು ದಾಖಲಾಗಿದ್ದು, ಈಗಲೂ ವಿಚಾರಣೆ ನಡೆಯುತ್ತಿದೆ. ಈ ಪ್ರಕರಣಗಳು ವಿಚಾರಣೆಗೆ ಬಂದಿದ್ದಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆಯಲ್ಲಿ ಉಂಟಾಗಿರುವ ಸಮಸ್ಯೆಯನ್ನು ಪರಿಹರಿಸಲು ಅಗತ್ಯವಿರುವ ಎಲ್ಲಾ ಕ್ರಮವನ್ನು ಕೈಗೊಳ್ಳುವಂತೆ ಹಾಗೂ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಕ್ರಮ ಜರುಗಿಸುವಂತೆ ನ್ಯಾಯಲಯವು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>**ಸರ್ಕಾರಿ ಆದೇಶ ಸಂಖ್ಯೆ: ನಅಇ 206 ಎಂಎನ್‌ವೈ 2013,**</u>
<u>**ಬೆಂಗಳೂರು, ದಿನಾಂಕ: 21-11-2013.**</u>

11. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರವು, M/s MSGP Infra tech Private Limited ಸಂಸ್ಥೆಯವರು ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಗರನಹಳ್ಳಿ ಗ್ರಾಮದ ಸರ್ವೆ ನಂ.1,2,3,7 & 11 ಹಾಗೂ 8 ಪೈ ಪಿ1 ಗಳಲ್ಲಿನ ತಮ್ಮ ಸ್ವಂತ ಜಮೀನಿನಲ್ಲಿ ಪ್ರತಿದಿನಕ್ಕೆ 500(ಐದು ನೂರು) ಮೆ.ಟನ್ ಸಾಮರ್ಥ್ಯದ ಘನತ್ಯಾಜ್ಯ ನಿರ್ವಹಣೆ/ಸಂಸ್ಕರಣೆ ಘಟಕವನ್ನು ಸ್ಥಾಪಿಸಿ 20 (ಇಪ್ಪತ್ತು) ವರ್ಷಗಳ ಅವಧಿಗೆ ನಿರ್ವಹಿಸಲು; ನಂತರದ 15 ವರ್ಷಗಳ Post Closure ಅವಧಿಯಲ್ಲಿ ನಿರ್ವಹಣೆ ಮಾಡಲು; ಗುತ್ತಿಗೆದಾರರಿಗೆ ಪ್ರತಿ ಮೆಟ್ರಿಕ್ ಟನ್ನಿಗೆ ರೂ.171.00(ಒಂದು ನೂರ ಎಪ್ಪತ್ತೊಂದು ರೂಪಾಯಿಗಳು ಮಾತ್ರ) ಗಳ ಸಂಸ್ಕರಣಾ/ಟಿಪ್ಪಿಂಗ್ ಶುಲ್ಕವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪಾವತಿಸಲು ಮತ್ತು ಪ್ರತಿ ಮೂರು ವರ್ಷಗಳಿಗೆ ಶೇ.10(ಹತ್ತು) ರಷ್ಟು ದರವನ್ನು ಹೆಚ್ಚಿಸುವ ಪ್ರಸ್ತಾವನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ:

(1) Entire processing of MSW shall be done in closed environment.
(2) Greenery (buffer zone) shall be developed around the site.
(3) Entire Property shall be fenced.
(4) Preference shall be given to the local people for the employment.
(5) It is the responsibility of the agency to ensure good relationship with local residents.
(6) Existing pollution control morms shall be strictly adhered to.

(7) Pollution level shall be monitored frequently.
(8) Company shall adhere to the instructions/policies/ orders issued by the Government or other Authorities, from time to time
(9) The Company shall appoint a full time Environment Engineer for the plant.
(10) The Company shall receive and commence the processing of MSW within six months of signing the agreement.
(11) BBMP to ensure that all the necessary permissions are obtained by bidder under applicable laws and all formalities are met with.
(12) BBMP to ensure total compliance to KTPP Act/Rules
(13) BBMP to ensure that enough safeguards are in place so as to handle any situation of default. "

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಗೋಪಾಲಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ)

21/11/13

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಜಂಟಿ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಮುಖ್ಯ ಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವ ಸಂಪುಟ) (ವಿಷಯ ಸಂಖ್ಯೆ: ಸಿ756/2013), ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3 ಮತ್ತು 9), ವಿಧಾನ ಸೌಧ, ಬೆಂಗಳೂರು.
9. M/s MSGP Infra tech Private Limited, No.179, 4th Main, 2nd "A" Cross, Domlur 2nd Stage, Bangalore-560 071.
10. ಶಾಖಾ ರಕ್ಷಾ ಕಡತ/ ಇಲಾಖಾ ಅಂತರ್ಜಾಲ ತಾಣ/ಹೆಚ್ಚುವರಿ ಪ್ರತಿ.

ವಿ.ಪ. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 367ಕ್ಕೆ ಅನುಬಂಧ-3

| [illegible] | [illegible] | [illegible] | [illegible] | ಅವಧಿ | ಆದೇಶದ [illegible] ಪ್ರತಿ | [illegible] ಪ್ರತಿ |
|---|---|---|---|---|---|---|
| 01. | ಚಿಕ್ಕನಾಗಮಂಗಲ | ಬಾಲಾಜಿ ಎಂಟರ್ ಪ್ರೈಸಸ್, ಬೆಂಗಳೂರು. | ಜಂಟಿ ಆಯುಕ್ತರು (ದಕ್ಷಿಣ) | 1 ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ (21.03.2022-20.03.2023 ಅಥವಾ ಮುಂದಿನ ಆದೇಶದ ವರೆಗೆ). | ಆದೇಶದ ಪತ್ರದ ದಿನಾಂಕ: 21.03.2022 (ಲಗತ್ತಿಸಿದೆ). | - |
| 02. | ದೊಡ್ಡಬಿದರಕಲ್ಲು | ಲಿಬ್ರಾ ಡಿಟೆಕ್ಟಿವ್ & ಸೆಕ್ಯೂರಿಟಿ ಸರ್ವೀಸಸ್, ಬೆಂಗಳೂರು. | ಜಂಟಿ ಆಯುಕ್ತರು (ದಾಸರಹಳ್ಳಿ) | ಟೆಂಡರ್ ಮುಖೇನ ಘಟಕದ ನಿರ್ವಹಣೆ ಹಸ್ತಾಂತರವಾಗುವವರೆಗೂ. | ಆದೇಶದ ಪತ್ರದ ದಿನಾಂಕ: 21.11.2017. (ಲಗತ್ತಿಸಿದೆ). | - |
| 03. | ಕೆಸಿಡಿಸಿ | ಮೆ// ವಾರ್ಚ್ ವಾಚ್ ಇನ್‌ವೆಸ್ಟಿಗೇಷನ್ ಸೆಕ್ಯೂರಿಟಿ ಸರ್ವೀಸಸ್, ಮೈಸೂರು. | ವ್ಯವಸ್ಥಾಪಕ ನಿರ್ದೇಶಕರು ಕೆಸಿಡಿಸಿ / ಬೊಮ್ಮನಹಳ್ಳಿ | 1 ವರ್ಷದ ಅವಧಿಗೆ (01.09.2022 ರಿಂದ) | ಆದೇಶದ ಪತ್ರದ ದಿನಾಂಕ: 26.08.2022. (ಲಗತ್ತಿಸಿದೆ). | ಲಗತ್ತಿಸಿದೆ. |
| 04. | ಲಿಂಗಧೀರನಹಳ್ಳಿ | ಶ್ರೀ ದುರ್ಗಾಪರಮೇಶ್ವರಿ ಎಂಟರ್ ಪ್ರೈಸಸ್, ಬೆಂಗಳೂರು. | ಜಂಟಿ ಆಯುಕ್ತರು (ಪೂರ್ವ) | ದಿ: 06.06.2022 ರಿಂದ ಕಛೇರಿಯ ಮುಂದಿನ ಆದೇಶದ ವರೆಗೆ. | ಆದೇಶದ ಪತ್ರದ ದಿನಾಂಕ: 02.06.2022. (ಲಗತ್ತಿಸಿದೆ). | - |
| 05. | ಸುಬ್ರಾಯನಪಾಳ್ಯ | ಮೆ// ಓಂ ಅಪರಾಜಿತ Solid Waste Management LLP, ಬೆಂಗಳೂರು. | ಜಂಟಿ ಆಯುಕ್ತರು (ಮಹದೇವಪುರ) | ನಿಗಮವು ತೆಗೆದುಕೊಳ್ಳುವ ಅಂತಿಮ ತೀರ್ಮಾನದ ವರೆಗೆ ಈ ಆದೇಶವು ಚಾಲ್ತಿಯಲ್ಲಿರುತ್ತದೆ. | ಆದೇಶದ ಪತ್ರದ ದಿನಾಂಕ: 12.01.2022. (ಲಗತ್ತಿಸಿದೆ). | - |

Scanned by CamScanner

| | | | | | | |
|---|---|---|---|---|---|---|
| 06 | ಕನ್ನಹಳ್ಳಿ | [illegible] ಸ್ಥಗಿತಗೊಳಿಸಲಾಗಿದೆ | ಜಂಟಿ ಆಯುಕ್ತರು (ಪಶ್ಚಿಮ) | - | - | - |
| 07 | ಸೀಗೇಹಳ್ಳಿ | ಸ್ಥಳೀಯ ಸಮಸ್ಯೆಯಿಂದ ಘಟಕ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. | ಜಂಟಿ ಆಯುಕ್ತರು (ಆರ್ ಆರ್ ನಗರ) | - | - | - |

As per the Hon'ble High Court order dated: 06.04.2018 each Zonal Joint Commissioner has to maintain one one plant of BBMP. The services of Human source is being procured from the agencies by the Zonal Joint Commissioners for O&M operation of the plants. The details are as under

| Sl. No. | Plant Name | Name of the Agency | Zonal Joint Commissioner under BBMP Jurisdiction | Period | Order copy | Agreement copy. |
|---|---|---|---|---|---|---|
| 01. | Chikkanagamangala | Sri. Balaji Enterprises, Bangalore. | Joint Commissioner (South) | 1 year or until further order. | Order copy dated: 21.03.2022 enclosed. | - |
| 02. | Doddabidarakallu | Libra Detective & Security Services, Bangalore | Joint Commissioner (Dasarahalli) | Till finalization of tender for O&M operation and handing over. | Order copy dated: 21.11.2017 enclosed. | - |
| 03. | KCDC | M/s. Sharp watch Investigation Security Services, Mysore. | Managing Director KCDC/ Bommanahalli | 1 year period (from 01.09.2022 to 31.08.2023) | Order copy dated: 26.08.2022 enclosed. | Enclosed |



Scanned by CamScanner